Regd No M 1299 SATYAVADI Founded 1917

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 31 ಸಂಚಿಕೆ 143] ಶುಕ್ರವಾರ 23—4—48 [ಬಿಡಿ ಪ್ರತಿ 3 ಪೆ

ಪಾಕಿಸ್ತಾನದ ಕಥೆ—

ನಿತ್ಯ ಕಲ್ಯಾಣ

(ಮುಂದುವರಿದುದು)

ಇಷ್ಟು ಹೇಳಿ ರಾಜಕುಮಾರಿಯವರು ಡಿಲ್ಲಿಗೆ ಹಿಂತಿರುಗಿದರು. ಗಾಂಧೀಜಿ ವರೊಡನೆ ಎಲ್ಲವನ್ನೂ ತಿಳಿಸಿದರು. ಂಧೀಜೀ ವ್ಯಸನಪಟ್ಟರು ; ಅ ವ ರು ಗೆ ಹೇಳಿದರು— 'ಪ ಂ ಜಾ ಬು ತಶಿಕ್ಷಿತ ಹುಡುಗಿಯರು ದೇಶ ವಿಪ್ಲ ವದ ಬಲಾತ್ಕಾರಗಳಿಗೆ ತುತ್ತಾದವರು. ವರಲ್ಲೀನೂ ತಪ್ಪನ್ನು ನಾವು ಎಣಿಸು ದಿಲ್ಲ ; ಹಿಂದೂ ಯುವಕರು ಮುಂ ಬಂದು ಅವರನ್ನು ಸ್ವೀಕರಿಸಬೇಕು : ೀಕಾದರೆ ನಿಮ್ಮ ಇಷ್ಟಬಂದಂತೆ ಶುದ್ಧಿ ಯಿರಿ ; ನಿಸ್ಸಂಕೋಚವಾಗಿ ಂದನ್ನು ಪರಿಗ್ರಹಿಸಿ ರಾಷ್ಟ್ರ ನ್ನು ಮಾಡುತ್ತಾ ಸುಖವಾಗಿ ನ್ನೂ ಹೃತ್ಪೂರ್ವಕವಾದ ಆ ದವಿದೆ. ಈ ವಿಷಯವಾಗಿ ಹುವ ಯುವಕರು ನನ್ನೊಡನೆ ಮಾತನಾಡಬಹುದು.

ಜೀಯವರು ಈ ಹೇಳಿಕೆಯ ಮೂಲದಿಂದ ಪ್ರಕಟಿಸಿದ ದಿಲ್ಲ ; ಆದರೆ ಅವರ ಹಿಂದೂ ಯುವಕರು ದರೆ : ಈ ಪ್ರಕಟಣೆಯ ಬಿಹಾರಿನ ಯುವಕರು ಬ್ಬೊಬ್ಬರಾಗಿ ಗಾಂಧೀಜೀಯವರ ಭೇಟಿ ಮಾಡಿದರು. ಅವರು ಗಾಂಧೀಜೀಯ ವರ ಪಾದಗಳನ್ನು ಮುಟ್ಟಿ ನಮಸ್ಕರಿಸಿ, ತಾವು ನಿರಾತ್ರಿತ ಹುಡುಗಿಯರನ್ನು ಶುದ್ಧ ಮನಸ್ಸಿನಿಂದ ಸ್ವೀಕರಿಸುವುದಾ ಗಿ ತಿಳಿಸಿದರು ಗಾಂಧೀಜಿಯವರು ಸಂತೋಷದಿಂದ ಹರಸಿದರು. ಒಂದು ದಿನ ಬೀಹಾರಿನ 12 ಮಂದಿ ಯುವಕರು ಗಾಂಧೀಜಿಯವರನ್ನು ಭೇಟಿ ಮಾಡಿದ ರು. ಅವರು ಹಂಸಿ, ರಾಜಕುಮಾರಿ ಅಮೃತಕೌರ್‌ರನ್ನು ಕಾಣುವಂತೆ ಹೇಳಿದರು.

ಅಮೃತಕೌರ್‌ರವರು ಯುವಕರನ್ನು ಕರೆದು, ಹುಡುಗಿಯರ ಪರಿಚಯವನ್ನು ತಿಳಿಸಿ, 12 ಮಂದಿ ನಿರಾಶ್ರಿತ ಹುಡುಗಿ ಯರನ್ನು ಅವರಿಗೆ ವಿವಾಹಮಾಡಿಸಿದರು. ಈ ಅನಾಥ ವಿವಾಹವು ದಿನಾಲೂ ನಡೆ ಯುತ್ತಿದೆಯಂತೆ. 'ನಿತ್ಯ ಕಲ್ಯಾಣ ವೆಂದರೆ ಇದೇ. (ಕೃ. ಸಂ)

ಅಮೇರಿಕಾದಲ್ಲಿ ಭಾರಿ ಮುಷ್ಕರ

ಬಹು ಭಾರಿ ಗಿರಾಕಿ

ನ್ಯೂಯಾರ್ಕಿನಲ್ಲೊಂದು ಬ್ಯಾಂಕಿಗೆ ಗಿಡ್ಡ ಮುದುಕಿಯೊಬ್ಬಳು ಹೋಗಿ ಆ ಬ್ಯಾಂಕಿನಲ್ಲಿ ತಾನು ಲೆಕ್ಕ ಷುರು ಮಾಡಬಹುದೇ ಎಂದು ವಿಚಾರಿಸಿ ಕೇಳಿದಳು. ನಿಯಮಿತವಾದ ಶಿಲ್ಕನ್ನು ಇಡುವುದಾದರೆ ಆಗಬಹುದು ಎಂದು ಉತ್ತರ ಬಂತು. ಆಗ ಕಿಸೆಯಿಂದಲೂ ಜೇಬಿನಿಂದಲೂ, ಮತ್ತೆ ಎಲ್ಲೆಲ್ಲಿಂದಲೋ ನೋಟುಗಳ ಪುಡುಕೆಗಳನ್ನು ಒಂದೊಂದೇ ತೆಗೆಯುತ್ತಾ ಮುರದೆ ಒಂದು ರಾಶಿಯನ್ನೇ ಚೆಲ್ಲಿದಳು. ' 110 ಲಕ್ಷ ಡಾಲರು ಆಗಬಹುದು. ಆಗ ಬ್ಯಾಂಕಿನವರು ಗಾಬರಿಗೊಂಡರು. ಜೋರ್ಡಿನ ಅವಸರದ ಸಭೆ ಕೂಡಿ ಇದರ ವಿಚಾರ ಮಾಡಿತು. ಲ ಹಣವನ್ನು ಜಮಾ ಮಾಡಿಕೊಳ್ಳಬೇಕೆಂದು ನಿರ್ಧರಿಸಿ ಇದನ್ನು ಗುಟ್ಟಾಗಿ ಇರಬೇಕೆಂದು ನಿರ್ಣಯವಾಯಿತು

o o

ವಿದ್ಯಾರ್ಥಿಗಳ ಸಭೆ

ವೈಸೂರು ಏ 22— ಈ ದಿನ ಮಧ್ಯಾಹ್ನ ಮಹಾರಾಜಾ ಕಾಲೇಜು ಮುಂಭಾಗದಲ್ಲಿ ಶ್ರೀ ಶಾಂತರಾಜ'ರವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು, 6 ನಿರ್ಣಯಗಳು ಮಂಜೂರಾದವು. ಆ ಪೈಕಿ ಮೊದಲನೆಯದು— ಮೇ ತಿಂಗಳಲ್ಲಿ ನಡೆಯುವ ಪಬ್ಲಿಕ್ ಪರೀಕ್ಷೆಗಳನ್ನು ಒಂದು ತಿಂಗಳ ಕಾಲ ಮುಂದುವರಿಸಿ, ಹೆಚ್ಚು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ತೇರ್ಗಡೆ ಹೊಂದಲು ಅವಕಾಶ ಕಲ್ಪಿಸಿಕೊಡಬೇಕೆಂದು ಸರಕಾರವನ್ನು

ಶ್ರೀ ದ್ವಾರಕಾ ಜಗದ್ಗುರುಗಳು

(ಸ್ವಂ. ಸು. ತಂತಿ)

ನಾಸಿಕ್ ಏ 21— ಶ್ರೀ ದ್ವಾರಕಾ ಶಾರದಾ ಪೀಠದ,ಶ್ರೀ ಜಗದ್ಗುರು ಶ್ರೀ ಶಂಕರಾಚಾರ್ಯ ಸ್ವಾಮಿ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಮಹಾರಾಜರವರು ಪಾವ್ಗಡ ಬೆಟ್ಟಗಳು, ಪಲಾಲ್, ಪ್ಯಾಲ್ಲಿ ಪಾದ್ರ, ನವಸಾರಿಗಳಿಗೆ ಭೇಟಿ ಕೊಟ್ಟು ತಾ || 20 ರಲ್ಲಿ ನಾಸಿಕ್ಕಿಗೆ ಆಗಮಿಸಿ ಭದ್ರವ ಮಂದಿರದಲ್ಲಿ ಬಿಡಾರ ಮಾಡಿರುವರು. ತ್ರೀ ಜಗದ್ಗುರುಗಳು ಶ್ರೀ ಗೋದಾವರಿಯಲ್ಲಿ ಸ್ನಾನಮಾಡಿ ಮುಖ್ಯ ದೇವಸ್ಥಾನಗಳನ್ನು ಸಂದರ್ಶಿಸಿದರು. ಬಹು ಮಂದಿ ಹಾಜರಾಗಿದ್ದ ಸಭೆಯಲ್ಲಿ ಶ್ರೀ ಜಗದ್ಗುರುಗಳು ಹೃದಯಂಗಮವಾದ ಭಾಷಣ ಮಾಡಿದರು. ಅವರ ವಾಸ್ತವ್ಯವು ದಿನವಹಿ ನಡೆಯುತ್ತಿದೆ. ಜಗದ್ಗುರುಗಳು ಪವಿತ್ರ ಸ್ನಾನನಡೆಸಿ, ತ್ರಿಯಂಬಕೇಶ್ವರ ಭೀಮೇಶ್ವಂಗಳಿಗೆ ಭೇಟಿಯಿತ್ತು, ಪೂನಾ ಕೊಲ್ಲಾಪುರ ಹುಬ್ಬಳ್ಳಿ ಮಾರ್ಗವಾಗಿ ಮೈಸೂರು ಸಂಸ್ಥಾನಕ್ಕೆ ಒಂದು ವಾರದಲ್ಲಿ ಹೊರಡುವರು.

o o

ಚಂದ್ರಗ್ರಹಣ

ಈ ದಿನ ಚಂದ್ರಗ್ರಹಣ ಸಂಜೆ 6.50 ರಿಂದ 7—24 ರವರಿಗೆ. ಈ ಸಂಧರ್ಭಕ್ಕಾಗಿ ಸ್ಪೆಷಲ್ ರೈಲು 5—15 ಶ್ರೀರಂಗಪಟ್ಟಣಕ್ಕೆ ಬಿಡಲಾಗುವುದು ; ಅದು 9—3೫ ಕ್ಕೆ ವಾಪಸ್ಸಾಗುವುದು.

o o

ಮುಸೋಲಿನಿ ಪತ್ನಿ

ಮುಸೋಲಿನಿ ಪತ್ನಿ ಅಮೇರಿಕಾ ಪ್ರಜೆಯಾಗಲು ಅರ್ಜಿಹಾಕಿಕೊಂಡಿದ್ದಾ ದು ಪ್ರಕಟವಾಗಿದೆ

ಇಂದಿನ ವರ್ತಮಾನ

ಪೀಟ್ಸ್‌ಬರ್ಗ್— ತಮ್ಮ ಮುಖಂಡ ಜಾ ಲೂವಿಸ್ಸಿಗೆ ಕೋರ್ಟಿಗೆ ಅಪಮಾನ ಮಾಡಿದ ಅಪವಾದನೆಗಾಗಿ ಸಜಾ ವಿಧಿಸಿದುದನ್ನು ಪ್ರತಿಭಟಿಸಿ ಅಮೇರಿಕಾದ 75 ಸಾವಿರ ಮಂದಿ ಗಣಿ ಕೆಲಸಗಾರರು ಮುಷ್ಕರ ಹಿಡಿದಿದ್ದಾರೆ.

o o

ಡಾಕಾ— ಮೆಡಿಕಲ್ ಸ್ಕೂಲು ವಿದ್ಯಾರ್ಥಿಗಳು ಮುಷ್ಕರ ಹಿಡಿದಿದ್ದಾರೆ

o o

ಸವದೆಹಲ..... ಧೀಜೀ ಬೂದಿಯು ಕಡೆಗೆ ಗಂಗೋತ್ರಿಯಲ್ಲಿ

o

ಬೆಂಗಳೂರು.... ಶ್ರೀ ಮಹಾವಿ 2548 ನೇ ಜಯಂತ್ಯುತ್ಸವವು ನೆರವೇರಿಸಲಾಯಿತು.

o o

ಲೇಕ್ ಸಕ್ಸೆಸ್— ಭದ್ರತಾ ಸಮಿತಿಯು ಕಾಶ್ಮೀರದಲ್ಲಿ ಪ್ರಜಾಭಿಪ್ರಾಯ ತೆಗೆದುಕೊಳ್ಳುವುದರ ಮೇಲ್ವಿಚಾರಣೆಗೆ 5 ಸದಸ್ಯರ ಕಮಿಷನ್ ನೇಮಿಸಲು ಅಂಗೀಕರಿಸಿ ಠರಾವು ಮಾಡಿದೆ

o o

ಮದರಾಸು:.... ಅನೇಕ ಕಡೆ ಅಕ್ಕಿ ಬೆಲೆ ವಿಪರೀತ ಹೆಚ್ಚುತ್ತಿದೆಯೆಂದು ಹೇಳಲಾಗಿದೆ.

o o

ಜಮ್ಮು:.... ಭಾರತ ಪಡೆಯು ಕಾರರನ್ನು ಓಡಿಸಿ ಅನೇಕ ಸ್ಥಳಗಳನ್ನು ವಶಪಡಿಸಿಕೊಂ

o o

ಹೈದರಾಬಾದು— ನಿಜಾಂರವರು ಅಲ್ಲಿ ಸುಧಾರಣೆ ಬಗ್ಗೆ ಸಧ್ಯದಲ್ಲೇ ಘೋಷಣೆ ಹೊರಡಿಸುವರೆಂದು ಹೇಳಲಾಗಿದೆ. ರಾಜಕೀಯ ಬಂದಿಗಳ ಬಿಡುಗಡೆ ಆಜ್ಞೆಯಾಗಿದೆ.

o o

ದಮಾಸ್ಕಸ್.... ಯಹೂದ್ಯರ ವ್ಯಾಪಾರ ಸಹಾಯ ನಿಬ್ಬರ ಸಂಸ್ಥೆ ವಾರ್ತೆ.

ಬಿಟ್ಟಿ ಸಿನಿಮಾ

ಬ್ರಿಟನ್ನಿನಲ್ಲಿ ಪ್ರತಿ ಶನಿವಾರ 3 ಲಕ್ಷ ಬಾಲಕರು ಸಿನಿಮಾ ನೋಡುತ್ತಾರೆ. ಇವರಿಗಾಗಿ ಮುದ್ದಾಂ 250 ಚಲಚಿತ್ರ ಮಂದಿರಗಳು ಲಾಭವಿಲ್ಲದೆ ಆಟಗಳನ್ನು ತೋರಿಸುತ್ತವೆ.

o o

ಕೋರ್ಟುಗಳು ಬೆಳಿಗ್ಗೆ

ಸಂ | ವ್ಯಾಂತ್ಯದಲ್ಲಿ ಬೇಸಿಗೆಯಲ್ಲಿ ಪ್ರಾತಃಕಾಲ 6 ರಿಂದ 11 ಗಂಟೆವರೆಗೆ ಕೋರ್ಟುಗಳನ್ನು ಮಾಡಬೇಕೆಂಬ ವಿಚಾರ ನಡೆದಿದೆ.

o o

ಬಹಳ ಕಠಿಣವಾದ [illegible] ವ್ಯಾಧಿಗೆ [illegible] ಕಾ [illegible] ಫಲವಾಗಿ 'ಸ್ಪೈರೋಟ್ಹೈಸೈಡ್' ಎಂಬ ಔಷಧಿಯಿಂದ ಎಷ್ಟು ಹಳೆಯದಾದ ಕ್ಷಯವಾಧಿಯನ್ನಾದರೂ ಗುಣಪಡಿಸಬಹುದೆಂದು ಹೇಳಲಾಗಿದೆ.

o o

ಕೇವಲ ರಾಜಕೀಯ ಸ್ವಾತಂತ್ರ್ಯವು ಜನರನ್ನು ಉದ್ಧಾರಮಾಡಬಲ್ಲವೆ?

ಭರತಕ್ಕೆ ಕುಮಾರಪ್ಪನವರು ಈ ರೀತಿ ಹೇಳುತ್ತಾರೆ—

ಕೇವಲ ರಾಜಕೀಯ ಸ್ವಾತಂತ್ರ್ಯವು ಜನರನ್ನು ಉದ್ಧಾರ ಮಾಡಲಾರದು. ಅವರಿಗೆ ಆಹಾರ, ಬಟ್ಟೆ, ವಾಸಸ್ಥಾನ ಆರೋಗ್ಯ, ವಿದ್ಯೆ ಅಭಿವೃದ್ಧಿಗೆ ಅವಕಾಶಗಳು ಇರಬೇಕು. ಅವರು ಬಡತನ ವ್ಯಾಧಿಗಳು ಅಜ್ಞಾನ ಮದ್ಯಪಾನ [illegible] ದುಷ್ಟಶಕ್ತಿಗಳ ಅಧೀನದ [illegible] ಮರಾಗಿದ್ದಾರೆ. ಆತ್ಮಾಭಿ [illegible] ರ್ಗದಲ್ಲಿರುವ ಈ ಆತಂ [illegible] ತೊಲಗಿಸುವವರೆಗೂ ಅವರು [illegible] ರಾಗಲಾರರು. ಇದಕ್ಕಾಗಿ ಗಾಂಧೀಜಿಯವರು ಕುಟೀರ ಪರಿಶ ಮೋದ್ಯಮಗಳು ಸ್ವೈದ್ಯಸಹಾಯ, ವೃತ್ತಿ ವಿದ್ಯಾಪರಿಮತ್ತತ್ವ ಮೊದಲಾದ ಉದ್ಯಮಗಳಲ್ಲಿ ಕೈಹಾಕಿದ್ದು. ಇವೆಲ್ಲವೂ ಅಹಿಂಸಾ ಸಿದ್ಧಾಂತದಿಂದ ಜನಿಸಿದ ಚಿಗುರುಗಳು. ಇವೆಲ್ಲವೂ ಮನುಷ್ಯನಲ್ಲಿಯ ಶಕ್ತಿಗಳನ್ನು ಹೊರಗೆಡವಿ ಅವನ ಪೂರ್ಣ ವಿಕಾಸಕ್ಕೊಂದಲು ಸಹಾಯವಾಗುವುದು.

ವುಡ್‌ಲ್ಯಾಂಡ್ಸ್

Morning Shows at 10-30
for 4 Days From 23—4—48
— ಬೆಳಗಿನ ಪ್ರದರ್ಶನ —
ಸರ್ ಅಫ್ ಜಾಂಬೊ
(ಹಿಂದಿ)
ಪಾತ್ರ—ಬಿಮಲಕುಮಾರಿ

Woodlands

EVENING SHOWS
From 23—4—48
Dick Tracy Returns
A Republic Serial in 15 parts
Featuring— Ralph Bird
ಡಿಕ್ ಟ್ರಾಸಿ ರಿಟರ್ನ್ಸ್
Daily 3 Shows

At Opera

20—4—48 ರಿಂದ
ಗೀತಾ ನಿಜಾಮಿ, ಜೈರಾಜ್
ಪಾತ್ರವಹಿಸಿರುವ
ಪನ
(ಹಿಂದಿ)
ಪ್ರತಿ ದಿನ 3 ಆಟಗಳು
Morning Shows from 23-4-48
PILLOW TO POST

ಬೇಸಿಗೆ ಬಿಸಲಿನ
ತಾಪಕ್ಕೆ ಹೆದರಬೇಡಿ
ಅಯ್ಯಂಗಾರ್ಯರಿಂದ ತಯಾರಾದ ತಂಪಾದ, ಶುಚಿಯಾದ, ರುಚಿಯಾದ ಉತ್ಕೃಷ್ಟ ಹಣ್ಣುಗಳಿಂದ ತಯಾರಾದ ಸರಬತ್ತನ್ನು ಸೇವಿಸಿ ಆನಂದಿಸಿರಿ.
ಅಯ್ಯಂಗಾರ್ ಸ್ಕ್ವೇರ್ಸ್
ಸೂರಡಿ ರಸ್ತೆ, ಮೈಸೂರು

Save the Cow

ಗೋ ವಧೆ ನಿಲ್ಲಲಿ

Edited, Printed and Published by M S Krishna Rao at the Satyavadi Press, Chamaraj Agrahar, Mysore

ನೌಕಾ ವಿಧದ ಪರಿಶೋಧನೆ



Advertise in ' Satyava

ಹೊಸ ಬೆಳೆಯ, ಆರಿಸಿ ತೆಗೆದ, ಪರಿಶುದ್ಧ
ಶ್ರೀ 'ಓಂ' ಗುರುತಿನ ಕ

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾರಂಟಿಯಾದುದು. ಸ್ಪೇನಿನ ಕೇಸರಿ ಗಿಡಗಳಲ್ಲಿಯ ಹೂಗಳಿಂದ ಆರಿಸಿ ತೆಗೆದುದಾಗಿದೆ. ನಮ್ಮಿಂದ ಸ್ಪೆಷಲ್ಲಾಗಿ ಅವುದು ಮಾಡಲ್ಪಟ್ಟಿರತಕ್ಕದ್ದು. ಬಹು ಹೊಳಪಿನಿಂದಲೂ ಸುವಾಸನೆಯಿಂದಲೂ ಕೂಡಿದುದಾಗಿದೆ. ಏನೊಂದೂ ಅಕ್ಷೇಪಣೀಯ ಪದಾರ್ಥಗಳೂ ಸೇರಿಲ್ಲ. ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ. ದೇವಸ್ಥಾನಗಳಲ್ಲಿಯೂ, ದೇವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂಡಿಪದಾರ್ಥಗಳಿಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸುಮಾಡಲಾಗಿದೆ. ತೋಲಾ, ತೋಲಾ, ಡಬ್ಬಗಳಲ್ಲಿಯೂ, ಚಿಲ್ಲರೆಯಾಗಿಯೂ ದೊರೆಯುತ್ತದೆ. ಉಪಯೋಗಿಸಬೇಕಾಗಿ ವಿನಂತಿ.

ವಲ್ಲಭದಾಸ್ ತೇಜ್‌ಪಾಲ್
೧೪ ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸ್.